**Series ΨYZXW/C** **Set-4**

**Q.P. Code 13**

Roll No. [ ][ ][ ][ ][ ][ ][ ][ ]

Candidates must write the Q.P. Code on the title page of the answer-book.

# ಕನ್ನಡ

# KANNADA

*ಅನುಮತಿಸಲಾದ ಸಮಯ : **3** ಗಂಟೆ* *ಗರಿಷ್ಠ ಅಂಕಗಳು : **80***

*Time allowed : **3** hours* *Maximum Marks : **80***

- ಈ ಪ್ರಶ್ನೆ ಪತ್ರಿಕೆಯಲ್ಲಿ **27** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **17** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

- Please check that this question paper contains **27** printed pages.
- Q.P. Code given on the right hand side of the question paper should be written on the title page of the answer-book by the candidate.
- Please check that this question paper contains **17** questions.
- **Please write down the serial number of the question in the answer-book before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

***General Instructions :***

*Read the following instructions carefully and follow :*

*(i)* *This question paper contains* ***A, B, C*** *and* ***D four (4)*** *Sections and It has total* ***17*** *questions.*

*(ii)* ***Section A*** *: (Unseen Comprehension (Passage) Question No.* ***1*** *and* ***2****.*

*(iii)* ***Section B*** *: MCQs (Grammar) Question No.* ***3*** *to* ***6****.*

*(iv)* ***Section C*** *: Seen Comprehension (Prose, Poem and Non-detailed portion) Question No.* ***7*** *to* ***9****.*

*(v)* ***Section D*** *: Descriptive type. Question No.* ***10*** *to* ***17****.*

*Attempt questions as per specific instructions.*

***ಸಾಮಾನ್ಯ ಸೂಚನೆಗಳು :***

***ಕೆಳಗೆ ನೀಡಲಾದ ಸೂಚನೆಗಳನ್ನು ಗಮನವಿಟ್ಟು ಓದಿ :***

*(i)* ಈ ಪ್ರಶ್ನೆ ಪತ್ರಿಕೆಯು ***A, B, C*** ಮತ್ತು ***D*** ಎಂಬ **ನಾಲ್ಕು** ***(4)*** ವಿಭಾಗಗಳನ್ನು ಮತ್ತು ***17*** ಪ್ರಶ್ನೆಗಳನ್ನು ಒಳಗೊಂಡಿದೆ.

*(ii)* ವಿಭಾಗ ***A,*** ವಾಚನ ಮತ್ತು ಗ್ರಹಿಕಾ ಕೌಶಲ. ಪ್ರಶ್ನೆ ಸಂಖ್ಯೆ ***1*** ಮತ್ತು ***2****.*

*(iii)* ವಿಭಾಗ ***B,*** ಬಹು ಆಯ್ಕೆ ಪ್ರಶ್ನೆಗಳು (ಅನ್ವಯಿಕ ವ್ಯಾಕರಣ) ಪ್ರಶ್ನೆ ಸಂಖ್ಯೆ ***3*** ರಿಂದ ***6****.*

*(iv)* ವಿಭಾಗ ***C,*** ಬಹು ಆಯ್ಕೆ ಪ್ರಶ್ನೆಗಳು (ಪಠ್ಯಗಳ ಅಧ್ಯಯನ) ಪ್ರಶ್ನೆ ಸಂಖ್ಯೆ ***7*** ರಿಂದ ***9****.*

*(v)* ವಿಭಾಗ ***D,*** ಬರವಣಿಗೆ ಕೌಶಲ್ಯ, ಪ್ರಸ್ನೆ ಸಂಖ್ಯೆ ***10*** ರಿಂದ ***17****.*

ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ನೀಡಿರುವ ಸೂಚನೆಗಳನ್ನು ಗಮನಿಸಿ.

## ಭಾಗ – A
## (ವಾಚನ ಮತ್ತು ಗ್ರಹಿಕಾ ಕೌಶಲ) : 10 ಅಂಕಗಳು

**1.** (A) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ : *5×1=5*

ನಾವು ಸೌರಶಕ್ತಿಯನ್ನು ಹಲವು ವಿಧಗಳಲ್ಲಿ ಹಿಡಿದಿಟ್ಟುಕೊಳ್ಳಬಹುದು. ಇದನ್ನು ಮಾಡಲು ಅತ್ಯಂತ ಪರಿಣಾಮಕಾರಿ ಮಾರ್ಗವೆಂದರೆ, ಸೌರ ವಿದ್ಯುತ್ ಸ್ಥಾವರಗಳನ್ನು ಬಳಸುವುದು. ಈ ವಿದ್ಯುತ್ ಸ್ಥಾವರಗಳ ವಿನ್ಯಾಸವು ದೊಡ್ಡ ಮಟ್ಟದಲ್ಲಿ ವಿದ್ಯುತ್ ಉತ್ಪಾದಿಸಲು ಸಹಾಯ ಮಾಡುತ್ತದೆ. ಸೌರಶಕ್ತಿಯಲ್ಲಿ ಕೆಲಸ ಮಾಡುವ ಇತರ ಉಪಕರಣಗಳೆಂದರೆ, ಸೌರ ಕುಕ್ಕರಗಳು, ಹೀಟರ್‌ಗಳು ಮತ್ತು ಕೋಶಗಳು. ಸೋಲಾರ್ ಕುಕ್ಕರ್‌ಗಳು ಇತ್ತೀಚಿನ ದಿನಗಳಲ್ಲಿ ಅಡುಗೆ ಮಾಡುವ ಅತ್ಯಂತ ನವೀನ ವಿಧಾನಗಳು. ಇದು ಅನಿಲ, ಸೀಮೆ ಎಣ್ಣೆ ಮತ್ತು ಸೌದೆಯಿಂತಹ ಸಾಂಪ್ರದಾಯಿಕ ಇಂಧನಗಳಿಗೆ ಉತ್ತಮ ಪರ್ಯಾಯವಾಗಿದೆ. ಅಲ್ಲದೆ ಪರಿಸರ ಸ್ನೇಹಿ ಮತ್ತು ಅಗ್ಗದ ಅಡುಗೆ ಸಾಧನಗಳಾಗಿವೆ.

ಅಂತೆಯೇ ಬಹಳಷ್ಟು ಕ್ಯಾಲ್ಕುಲೇಟರ್‌ಗಳು ಮತ್ತು ಮಣಿಕಟ್ಟಿನ ಗಡಿಯಾರ ಈ ತಂತ್ರಜ್ಞಾನದೊಂದಿಗೆ ಕಾರ್ಯನಿರ್ವಹಿಸುತ್ತವೆ. ಸೌರಶಕ್ತಿಯ ಪ್ರಮುಖ ಪ್ರಯೋಜನವೆಂದರೆ ಅದು ನವೀಕರಿಸಬಹುದಾದ ಮೂಲದಾಗಿದ್ದು ವಿದ್ಯುತ್ ಬಿಲ್‌ಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಪೆಟ್ರೋಲಿಯಂ ಮತ್ತು ಕಲ್ಲಿದ್ದಲಿನಂತಹ ನವೀಕರಿಸಲಾಗದ ಶಕ್ತಿಯ ಮೂಲಗಳ ಮೇಲೆ ನಾವು ಕಡಿಮೆ ಅವಲಂಬಿತರಾಗುತ್ತೇವೆ.

ಇದು ಶುದ್ಧ ಇಂಧನವಾಗಿದ್ದು, ಇದನ್ನು ಬಳಸುವುದರಿಂದ ಮಾಲಿನ್ಯ ಉಂಟಾಗದು. ಪರಿಸರಕ್ಕೆ ಹಾನಿ ಯಾಗುವುದಿಲ್ಲ, ಪರಿಣಾಮವಾಗಿ ವಾಯು ಮಾಲಿನ್ಯವು ಗಣನೀಯವಾಗಿ ಕಡಿಮೆಯಾಗುತ್ತದೆ. ಸರ್ಕಾರ ಈ ಶಕ್ತಿಯನ್ನು ನಮ್ಮ ದೈನಂದಿನ ಜೀವನದಲ್ಲಿ ಉತ್ತೇಜಿಸಲು ಮತ್ತು ಅಳವಡಿಸಲು ಪ್ರಯತ್ನಿಸಬೇಕು. ಇದು ಜಗತ್ತನ್ನು ಹಸಿರು ಮತ್ತು ಸ್ವಚ್ಛ ಸ್ಥಳವನ್ನಾಗಿ ಮಾಡುತ್ತದೆ. ಜಗತ್ತನ್ನು ಉತ್ತಮ ಸ್ಥಳವನ್ನಾಗಿ ಮಾಡಲು ನಾವೆಲ್ಲರೂ ಸೌರಶಕ್ತಿಗೆ

ಬದಲಾಯಿಸಲು ಪ್ರಯತ್ನಿಸಬೇಕು. ಸೌರಶಕ್ತಿಯು ನಮ್ಮ ಮುಂಬರುವ ಪೀಳಿಗೆಯ ಭವಿಷ್ಯವಾಗಿದೆ. ಇದು ಸುರಕ್ಷಿತ, ಹಸಿರು ಮತ್ತು ಆರ್ಥಿಕ ಪರ್ಯಾಯವಾಗಿದೆ. ಇದಲ್ಲದೆ ಇದನ್ನು ಮರು ಪೂರಣಗೊಳಿಸಬಹುದು. ಆದ್ದರಿಂದ ಇದು ಶಕ್ತಿಯ ನವೀಕರಿಸಬಹುದಾದ ಮೂಲವಾಗಿ ಕಾರ್ಯನಿರ್ವಹಿಸುತ್ತದೆ. ಸೌರಶಕ್ತಿಯು ಸೂರ್ಯನಿಂದ ಬರುವ ಶಕ್ತಿ. ಇದು ವಿಶಾಲವಾದ ಅಕ್ಷಯ ಮತ್ತು ಶುದ್ಧ ಸಂಪನ್ಮೂಲವಾಗಿದೆ ಆದ್ದರಿಂದ, ನಮ್ಮ ಗ್ರಹವನ್ನು ಉಳಿಸಲು ನಾವು ಸೌರಶಕ್ತಿಯನ್ನು ಹೆಚ್ಚು ಹೆಚ್ಚು ಬಳಸಲು ಪ್ರಯತ್ನಿಸಬೇಕು.

**ಪ್ರಶ್ನೆಗಳು :**

(i) ಸೌರಶಕ್ತಿಯಲ್ಲಿ ಕೆಲಸ ಮಾಡುವ ಉಪಕರಣಳಿವು .......

1. ಸೌರ ಕುಕ್ಕರ್ 2. ಹೀಟರ್

3. ವಾಹನ 4. ಕೋಶಗಳು

ಸರಿ ಉತ್ತರದ ಗುಂಪು ಆರಿಸಿ :

(a) 1, 2 ಮತ್ತು 4 ಸರಿ (b) 2, 3 ಮತ್ತು 4 ಸರಿ

(c) 1, 2 ಮತ್ತು 3 ಸರಿ (d) 1, 3 ಮತ್ತು 4 ಸರಿ

(ii) ಅನಿಲ, ಸೀಮೆಎಣ್ಣೆ ಮತ್ತು ಸೌದೆಗಳಿಗೆ ಪರ್ಯಾಯವಾದುದು :

(a) ವಿದ್ಯುತ್ (b) ಪವನಶಕ್ತಿ

(c) ಸೌರಶಕ್ತಿ (d) ಜಲಶಕ್ತಿ

(iii) ನವೀಕರಿಸಲಾಗದ ಶಕ್ತಿಯ ಮೂಲಗಳಿವು :

(a) ಪೆಟ್ರೋಲಿಯಂ – ವಿದ್ಯುತ್

(b) ಕಲ್ಲಿದ್ದಲು – ಜಲಶಕ್ತಿ

(c) ಪೆಟ್ರೋಲಿಯಂ – ಜಲಶಕ್ತಿ

(d) ಪೆಟ್ರೋಲಿಯಂ – ಕಲ್ಲಿದ್ದಲು

(iv) *ಹೇಳಿಕೆ 1 :* ಸೌರಶಕ್ತಿಯ ಬಳಕೆ ವಾಯುಮಾಲಿನ್ಯವನ್ನು ಕಡಿಮೆ ಮಾಡುತ್ತದೆ.

ಹೇಳಿಕೆ 2 : ಸುರಕ್ಷಿತ, ಹಸಿರು ಮತ್ತು ಆರ್ಥಿಕ ಪರ್ಯಾಯದಾಗಿದೆ.

ಸರಿಯಾದ ಗುಂಪು ಆರಿಸಿ :

(a) ಹೇಳಿಕೆ 1 ಸರಿ ಹೇಳಿಕೆ 2 ತಪ್ಪು

(b) ಎರಡೂ ಹೇಳಿಕೆ ತಪ್ಪು

(c) ಎರಡೂ ಹೇಳಿಕೆ ಸರಿ

(d) ಹೇಳಿಕೆ 1 ತಪ್ಪು ಹೇಳಿಕೆ 2 ಸರಿ

(v) ಸೌರಶಕ್ತಿಯು ........

(a) ಅಕ್ಷಯ ಮತ್ತು ಅಶುದ್ಧ

(b) ಕ್ಷಯ ಮತ್ತು ಶುದ್ಧ

(c) ಅಕ್ಷಯ ಮತ್ತು ಶುದ್ಧ

(d) ಕ್ಷಯ ಮತ್ತು ಅಶುದ್ಧ

**ಅಥವಾ**

(B) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ : *5×1=5*

ಇತ್ತೀಚಿನ ದಿನಗಳಲ್ಲಿ ರಸ್ತೆ ಅಪಘಾತಗಳ ಸುದ್ದಿ ಸಾಮಾನ್ಯವಾಗಿದೆ. ನಾವು ಯಾವುದೇ ಸುದ್ದಿ ವಾಹಿನಿಯನ್ನು ನೋಡಿದಾಗ / ನಮ್ಮ ಸಂಬಂಧಿಕರು, ನೆರೆಹೊರೆಯವರು ಅಥವಾ ಸ್ನೇಹಿತರೊಂದಿಗೆ ಮಾತನಾಡುವಾಗ ನಮಗೆ ರಸ್ತೆ ಅಪಘಾತಕ್ಕೆ ಸಂಬಂಧಿಸಿದ ಕೆಲವು ಸುದ್ದಿಗಳನ್ನು ಕೇಳುತ್ತೇವೆ. ಹೆಚ್ಚಿನವರ ಮನೆಯಲ್ಲಿ ಕಾರು, ಬೈಕ್, ಸ್ಕೂಟರ್‌ಗಳು ಇರುವುದರಿಂದ ಸಾರ್ವಜನಿಕ ಸಾರಿಗೆಯನ್ನು ಬಳಸುವ ಬದಲು ಪ್ರಯಾಣಕ್ಕಾಗಿ ತಮ್ಮ ವೈಯಕ್ತಿಕ ಸಾರಿಗೆಯನ್ನು ಬಳಸಲು ಬಯಸುತ್ತಾರೆ. ಹೀಗಾಗಿ ರಸ್ತೆ ಸಂಚಾರ ಹೆಚ್ಚುತ್ತಿದ್ದು, ಇದು ಪ್ರತಿವರ್ಷ ರಸ್ತೆ ಅಪಘಾತಗಳ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ರಸ್ತೆ ಅಪಘಾತಗಳು ಚಾಲಕನ ನಿರ್ಲಕ್ಷ್ಯದಿಂದ ಸಂಭವಿಸುತ್ತವೆ. ದ್ವಿಚಕ್ರ ವಾಹನ ಸವಾರರಲ್ಲಿ ಹೆಚ್ಚಿನವರು ಹೆಲ್ಮೆಟ್ ಧರಿಸದೇ ಇರುವುದರಿಂದ ಮೆದುಳು

ಗಾಯಗೊಂಡು ಅವಘಡ ಸಂಭವಿಸುವ ಸಾಧ್ಯತೆ ಹೆಚ್ಚು. ಹೀಗಾಗಿ ದ್ವಿಚಕ್ರ ವಾಹನ ಬಳಸುವವರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಅನೇಕ ಬಾರಿ ಜನರು ಟ್ರಿಪಲ್ ರೈಡಿಂಗ್ ಮಾಡುತ್ತಾರೆ ಇದು ಕಾನೂನುಬಾಹಿರ ಮತ್ತು ಅನಧಿಕೃತ .

ವಯಸ್ಕರಿಗಿಂತ ಅಪಾಯಕಾರಿ ಸಂದರ್ಭಗಳಲ್ಲಿ ಹದಿಹರೆಯದವರು ಆಗಾಗ್ಗೆ ಸೆಲ್ ಫೋನ್ ಬಳಕೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳುತ್ತಾರೆ. ಎಂದು ಸಂಶೋಧನೆ ತೋರಿಸಿದೆ. ಅತಿಯಾದ ವೇಗ ಕುಡಿದು ವಾಹನ ಚಲಾಯಿಸುವುದು ರಸ್ತೆ ಅಪಘಾತಗಳಿಗೆ ಪ್ರಮುಖ ಕಾರಣಗಳಾಗಿವೆ. ಇವುಗಳಲ್ಲದೆ, ವಿರುದ್ಧ ಲೇನ್‌ನಲ್ಲಿ ಚಾಲನೆ, ಅಸಮರ್ಪಕ ತಿರುವುಗಳು, ಅಸುರಕ್ಷಿತ ಲೇನ್ ಬದಲಾವಣೆ, ವಾಹನದಲ್ಲಿನ ದೋಷಗಳು, ಬೆರಗುಗೊಳಿಸುವ ಹೆಡ್‌ಲೈಟ್‌ಗಳು, ಅಜಾಗರೂಕ ಚಾಲನೆ, ಹೆಚ್ಚಿನ ಅಪಘಾತಗಳು ಓವರ್‌ಟೇಕ್ ಮಾಡುವುದರಿಂದ ಸಂಭವಿಸುತ್ತವೆ. ಕೆಲವರು ಲೇನ್ ಶಿಸ್ತು ಅನುಸರಿಸುವುದಿಲ್ಲ. ರಸ್ತೆಯಲ್ಲಿ ನಡೆಯುವ ಜನರು ಪಾದಚಾರಿಗಳು ರಸ್ತೆಯನ್ನು ಅನುಸರಿಸಬೇಕು ಮತ್ತು ಗೊತ್ತುಪಡಿಸಿದ ಪಾದಚಾರಿ. ಕ್ರಾಸಿಂಗ್‌ಗಳಲ್ಲಿ  ರಸ್ತೆ ದಾಟಲು ಪ್ರಯತ್ನಿಸಬೇಕು. ರಸ್ತೆಗಳ ದುರವಸ್ಥೆಯಿಂದಾಗಿ ಹಲವು ರಸ್ತೆ ಅಪಘಾತಗಳು ಸಂಭವಿಸುತ್ತಿವೆ. ಭಾರತದಲ್ಲಿ ರಸ್ತೆಗಳು ದುರದೃಷ್ಟವಶಾತ್ ಅವುಗಳ ಗುಂಡಿಗಳಿಗೆ ಪ್ರಸಿದ್ಧವಾಗಿವೆ. ಈ ಹೊಂಡಗಳು ವಾಹನ ಚಾಲಕರ ಬೆನ್ನುಮೂಳೆ ಮತ್ತು ಒಟ್ಟಾರೆ ಆರೋಗ್ಯದ ಮೇಲೆ ಒತ್ತಡವನ್ನು ಉಂಟು ಮಾಡುವುದು ಮಾತ್ರವಲ್ಲದೆ, ವಾಹನಗಳನ್ನು ಹಾಳುಮಾಡುತ್ತವೆ.

**ಪ್ರಶ್ನೆಗಳು :**

(i) ಕೆಲವರು ವೈಯಕ್ತಿಕ ಸಾರಿಗೆ ಬಳಸಲು ಕಾರಣ :

(a) ಅನಾರೋಗ್ಯದಿಂದಾಗಿ

(b) ಒಬ್ಬರೆ ಪ್ರಯಾಣ ಮಾಡಲು

(c) ಸ್ವಂತ ವಾಹನ ಹೊಂದಿರುವುದರಿಂದ

(d) ಸಮಯದ ಉಳಿತಾಯಕ್ಕೆ

(ii) ರಸ್ತೆ ಅಪಘಾತಗಳು ಮುಖ್ಯವಾಗಿ __________ ನಿರ್ಲಕ್ಷ್ಯದಿಂದ ಸಂಭವಿಸುತ್ತದೆ.

(a) ಜನತೆಯ

(b) ನಿಯಮಗಳ

(c) ನಿರ್ವಾಹಕನ

(d) ಚಾಲಕನ

(iii) ಟ್ರಿಪಲ್ ರೈಡಿಂಗ್ ________ .

(a) ಕಾನೂನುಬದ್ಧ – ಅನಧಿಕೃತ

(b) ಕಾನೂನುಬಾಹಿರ – ಅನಧಿಕೃತ

(c) ಕಾನೂನುಬಾಹಿರ – ಅಧಿಕೃತ

(d) ಅಧಿಕೃತ – ಕಾನೂನುಬದ್ಧ

(iv) ಅಪಾಯಕಾರಿ ಸಂದರ್ಭಗಳಲ್ಲಿ ಸೆಲ್‌ಫೋನ್ ಬಳಸುವವರು

(a) ವಯಸ್ಕರು

(b) ಬಾಲಕರು

(c) ಹದಿಹರೆಯದವರು

(d) ಪ್ರೌಢರು

(v) ರಸ್ತೆ ಅಪಘಾತಕ್ಕೆ ಕಾರಣಗಳು

1. ಅತಿಯಾದ ವೇಗ
2. ಅಸಮರ್ಪಕ ತಿರುವುಗಳು
3. ರಸ್ತೆ ನಿಯಮ ಪಾಲನೆ
4. ರಸ್ತೆಗಳ ದುರವಸ್ಥೆ

ಸರಿಯಾದ ಗುಂಪು :

(a) 1, 2, 4

(b) 1, 2, 3

(c) 2, 3, 4

(d) 3, 4, 1

**2.** (A) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ : *5×1=5*

ನಾವು ಡಿಹೈಡ್ರೇಟ್ ಆಗಿದ್ದೇವೆ ಎಂದು ತಿಳಿಯಲು ದೊಡ್ಡ ಪರೀಕ್ಷೆ ಏನೂ ಬೇಕಿಲ್ಲ ಮೂತ್ರ ಕೊಂಚ ಹಳದಿ ಬಣ್ಣಕ್ಕೆ ತಿರುಗಿದರೂ ನಮಗೆ ತಿಳಿಯುತ್ತದೆ. 'ನಮ್ಮ ದೇಹ ನೀರಿಗಾಗಿ ಕೂಗುತ್ತಿದೆ' ಎಂದು ಹೌದು, ಇದೇ ಹೆಸರಿನ ಪುಸ್ತಕ ಬರೆದ ಪ್ರಸಿದ್ಧ ವೈದ್ಯ ಡಾ. ಬ್ಯಾಟ್ ಮ್ಯಾಂಗ್ ಹೆಲಿಡ್ಜಿ, 'ಡಾ. ವಾಟರ್' ಎಂದೆ ಕರೆಸಿಕೊಂಡವರು.

ರಾಸಾಯನಿಕಗಳಿಂದ ತಯಾರಿಸಿದ ತಂಪು ಪಾನೀಯಗಳು ನಮ್ಮ ದೇಹವನ್ನು ಮತ್ತಷ್ಟು ಒಣಗಿಸುತ್ತವೆಯೆ ಹೊರತು, ದೇಹದ ನೀರಿನ ಅಗತ್ಯಗಳನ್ನು ಪೂರೈಸುವುದಿಲ್ಲ, 'ನೀರು ಔಷಧಿಯಾಗಬಲ್ಲದು, ದೇಹವನ್ನು ಗುಣವಾಗಿಸುವ ವಸ್ತುವಾಗಬಲ್ಲದು' ಎಂದು ಜಗತ್ತು ಮರೆತ ಸತ್ಯವನ್ನು ಮತ್ತೊಮ್ಮೆ ಕಂಡುಹಿಡಿದವರು ಡಾ. ವಾಟರ್ ಈತ ನೊಬೆಲ್ ಪ್ರಶಸ್ತಿಪಡೆದ ಪೆನ್ಸಿಲಿನ್ ಕಂಡುಹಿಡಿದ ಪ್ರಸಿದ್ಧ ವಿಜ್ಞಾನಿ ಸರ್ ಅಲೆಕ್ಸಾಂಡರ್ ಫ್ಲೆಮಿಂಗ್ ಅವರ ವಿದ್ಯಾರ್ಥಿಯಾಗಿದ್ದವರು.

ಅವರು ಕಂಡುಹಿಡಿದ ನೀರಿನ ಮಹಿಮೆಯ ನೂರಾರು ವೈದ್ಯಕೀಯ ಲೇಖನಗಳಾಗಿ ಹೊರಬಿದ್ದವು. ಸಾಮಾನ್ಯ ಜನರಿಗೆ ಅರ್ಥವಾಗುವಂತೆ, ಸರಳ ಭಾಷೆಯಲ್ಲಿ ನಾಲ್ಕು ಪುಸ್ತಕಗಳನ್ನು ಬರೆದರು. ಅದರ ಪ್ರಕಾರ, ದೇಹದಲ್ಲಿ ನೀರಿನ ಕೊರತೆ ಅನೇಕ ನೋವುಗಳಿಗೆ ರೋಗಗಳಿಗೆ ದಾರಿಯಾಗುತ್ತದೆ. ನೀರಿನಲ್ಲಿಗುಣ ಮಾಡುವ ಶಕ್ತಿ ಇದೆ, ನೀರಿನಲ್ಲಿರೋಗ ಬಾರದಂತೆ ತಡೆಯುವ ತಾಕತ್ತಿದೆ ನಮ್ಮ ದೇಹದ ಬಹಳಷ್ಟು ಭಾಗ ನೀರೆತಾನೆ. ಇವರ ಪ್ರಕಾರ ಅಲರ್ಜಿ, ಆಸ್ತಮಾ, ಹೃದ್ರೋಗ, ರಕ್ತದ ಒತ್ತಡ, ವಿಪರೀತ ಗಾತು, ಅಲ್ಸರ್, ಸಕ್ಕರೆ ಕಾಯಿಲೆ – ಹೀಗೆ ಬಹುಪಾಲು ನಮ್ಮ ರೋಗಗಳು ದೇಹದಲ್ಲಿನ ನೀರಿನ ಕೊರತೆಯಲ್ಲಿಹುಟ್ಟಿಕೊಂಡಿವೆ ಅನ್ನುತ್ತಾರೆ.

ನಮ್ಮ ದೇಹ ಬಾಯಾರಿದೆ. ನಮಗೆ ಬಾಯಾರಿಗೆ ಎಂದು ಗೊತ್ತದ ಮೇಲೆ ನೀರು ಕುಡಿಯುವುದಿಲ್ಲ ನಿಮ್ಮ ವಾಹನಕ್ಕೆ, ಕಡೆಯ ತೊಟ್ಟು ಪೆಟ್ರೋಲ್ ಮುಗಿಯುವರೆಗೂ ಕಾಯುತ್ತಿರೇನು ? ಇಲ್ಲವಲ್ಲ ದೇಹವೂ ಹಾಗೆಯೇ ನೀರಡಿಕೆ ಆಗುವ ಮೊದಲೇ ದಿನವೂ, ನಿಯಮಿತವಾಗಿ, ಇಡಿ ದಿನ ಆಗಾಗ ನೀರು ಕುಡಿಯ ಬೇಕು. 1982 ರಲ್ಲಿ ಅಮೇರಿಕದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯಕ್ಕೆ ಹೋಗಿ, ತಮ್ಮ ನೀರಿನ ಗುಣಕಾರಿ ವಿಷಯದ ಬಗ್ಗೆ ಸಂಶೋಧನೆ ಮುಂದುವರೆಸಿದ ಈತ, ಮುಂದಿನ ಎರಡು ದಶಕಗಳಿಗೂ ಮೀರಿ ನೀರನ್ನು ಕುರಿತು ಕೆಲಸ ಮಾಡಿದರು.

**ಪ್ರಶ್ನೆಗಳು :**

(i) ಮೂತ್ರ ಕೊಂಚ ಹಳದಿ ಬಣ್ಣಕ್ಕೆ ತಿರುಗಿದುದರ ಅರ್ಥ ________ .

(a) ನಮ್ಮ ದೇಹ ಆಹಾರಕ್ಕಾಗಿ ಕೂಗುತ್ತಿದೆ

(b) ನಮ್ಮ ದೇಹ ನೀರನ್ನು ತಿರಸ್ಕರಿಸುತ್ತಿದೆ

(c) ನಮ್ಮ ದೇಹ ನೀರಿಗಾಗಿ ಕೂಗುತ್ತಿದೆ

(d) ನಮ್ಮ ದೇಹಕ್ಕೆ ಏನೂ ಬೇಕಾಗಿಲ್ಲ

(ii) *ಹೇಳಿಕೆ 1 :* ನೀರು ಔಷದಿಯಾಗಲಾರದು.

ಹೇಳಿಕೆ 2 : ನೀರು ದೇಹವನ್ನು ಗುಣವಾಗಿಸುವ ವಸ್ತುವಾಗಬಲ್ಲದು.

ಹೇಳಿಕೆ 3 : ನೀರಿನಲ್ಲಿ ರೋಗ ಬಾರದಂತೆ ತಡೆಯುವ ತಾಕತ್ತಿದೆ.

ಸರಿಯಾದ ಗುಂಪು ಆರಿಸಿ :

(a) 1 ಮತ್ತು 2

(b) 3 ಮತ್ತು 1

(c) 2 ಮತ್ತು 1

(d) 2 ಮತ್ತು 3

(iii) ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ

(a) ಡಾ. ವಾಟರ್

(b) ಡಾ. ಬ್ಯಾಟ್‌ಮ್ಯಾಂಗ್ ಹೆಲಿಡ್ಜಿ

(c) ಸರ್ ಅಲೆಕ್ಸಾಂಡರ್ ಫ್ಲೆಮಿಂಗ್

(d) ಸರ್ ಬ್ಯಾಟ್‌ಮ್ಯಾಂಗ್

(iv) ದೇಹದಲ್ಲಿ ನೀರಿನ ಕೊರತೆಯಲ್ಲಿ ಹುಟ್ಟಿಕೊಳ್ಳುವ ರೋಗಗಳು

(a) ಅಲರ್ಜಿ ಹೃದ್ರೋಗ, ಅಲ್ಸರ್, ಕಾಮಾತಿ

(b) ಹೃದ್ರೋಗ, ರಕ್ತದ ಒತ್ತಡ, ಕೋರೋನ, ಅಸ್ತಮಾ

(c) ಅಸ್ತಮಾ, ಸಕ್ಕರೆ ಕಾಯಿಲೆ, ಹೃದ್ರೋಗ, ಅಲರ್ಜಿ

(d) ಹೃದ್ರೋಗ, ಅಲರ್ಜಿ, ಇರುಳುಗಣ್ಣು ಅಸ್ತಮಾ

(v) ಡಾ. ವಾಟರ್ ಅವರು ಪೆನ್ಸಿಲ್ವೇನಿಯಾ ವಿ.ವಿ.ಗೆ ಹೋದ ವರ್ಷ

(a) 1882

(b) 1932

(c) 1962

(d) 1982

**ಅಥವಾ**

(B) ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ : *5×1=5*

ಹಾರುವ, ಗೂಡುಕಟ್ಟುವ ವಲಸೆ ಹೋಗುವ ಸಾಮರ್ಥ್ಯಗಳೆಲ್ಲ ಹಕ್ಕಿಗಳಿಗೆ ನಿಸರ್ಗದತ್ತವಾಗಿ ಬಂದಿವೆ ಹೊಸದಾಗಿ ಏನನ್ನಾದರೂ ಕಲಿಯುವ ಸಾಮರ್ಥ್ಯ ಬಹುಪಕ್ಷಿಗಳಿಗಿಲ್ಲ. ಕಾಗೆಯನ್ನು ಹಕ್ಕಿಗಳಲ್ಲಿ ಬುದ್ಧಿವಂತ ಪಕ್ಷಿ ಎಂದು ಗುರುತಿಸಲಾಗಿದೆ. ಜಪಾನ್ ದೇಶದ ವರದಿಯೊಂದು ಹೀಗಿದೆ – ಅಲ್ಲಿನ ವಿಶ್ವವಿದ್ಯಾಲಯದ ಆವರಣದಲ್ಲಿ ವಾಸಿಸುವ ಕಾಗೆಗಳು ಬಹಳ

ಜಾಣಕಾಗೆಗಳಂತೆ ! ರಸ್ತೆಯಲ್ಲಿ ಸಂಚರಿಸುವ ವಾಹನಗಳು ಟ್ರಾಫಿಕ್ ಲೈಟ್ ಬಳಿ ಬಂದು ನಿಂತಾಗ, ಕಾಗೆಗಳು ತಾವು ಸಂಗ್ರಹಿಸಿದ ಗಟ್ಟಿ ಬೀಜಗಳಾದ ವಾಲ್ನಟ್‌ಗಳನ್ನು ರಸ್ತೆಯ ಮೇಲೆ ಚಲ್ಲಿ ಹಾರುತ್ತವೆ. ಅವುಗಳ ಮೇಲೆ ಗಾಡಿಗಳು ಚಲಿಸಿ ವಾಲ್ನಟ್ ಒಡೆಯುತ್ತವೆ. ಪುನಃವಾಹನಗಳು ನಿಂತಾಗ ಕಾಗೆಗಳು ಕೆಳಗೆ ಬಂದು ಬೀಜಗಳನ್ನು ತಿನ್ನುತ್ತವೆ. ಒಡೆಯದೇ ಉಳಿದ ಬೀಜವನ್ನು ಮತ್ತೆ ರಸ್ತೆಯ ಮೇಲಿರಿಸಿ, ಹತ್ತಿರದ ವಿದ್ಯುತ್ ತಂತಿಗಳ ಮೇಲೆ ಹಾರಿ ಕುಳಿತು ವಾಹನ ಚಲಿಸಿ ಬೀಜಗಳು ಒಡೆಯುವುದಕ್ಕಾಗಿ ಕಾಯುತ್ತವೆ ! ಗಮನಿಸಿ ಅತ್ಯಂತ ನಿಬಿಡವಾದ ಈ ರಸ್ತೆಗಳಲ್ಲಿ ಕಾಗೆಗಳಿಗೆ ಈ ಕಾರ್ಯಕ್ಕೆಸಿಗುವುದು ಹಲವು ಸೆಕೆಂಡುಗಳು ಮಾತ್ರ ! ಹಕ್ಕಿಗಳ ಕ್ರಿಯಾಶೀಲತೆ ಊಹಾತೀತ ! ಉದಾಹರಣೆಗೆ ಗುಬ್ಬಚ್ಚಿಗಳು ತಮ್ಮ ಮರಿಗಳಿಗೆ ದಿನವೊಂದಕ್ಕೆ ನೂರಾರು ಬಾರಿ ಗುಟುಕು ನೀಡುತ್ತವೆ. ಮಂಗಟ್ಟೆಹಕ್ಕಿ (ಹರ್ನ್‌ಬಿರ್) ತನ್ನ ಹೆಂಡತಿಯನ್ನು ಗೂಡಿನೊಳಗೇ ಇರಿಸಿ, ಮೂರು ಅಥವಾ ನಾಲ್ಕು ಮರಿಗಳಿಗೆ ಅದರ ತಾಯಿಗೆ, ದಿನವೊಂದಕ್ಕೆ 40 ಕ್ಕೂ ಹೆಚ್ಚು ಬಾರಿ ಆಹಾರವನ್ನು ತಂದು ತಿನ್ನಿಸುತ್ತದೆ. ಆದ್ದರಿಂದಲೇ ಅದರ ಕೊಕ್ಕೆಗಳು ನೀಳವಾಗಿಯೂ ಬಲಿಷ್ಟವಾಗಿಯೂ ಇವೆ. ಎಷ್ಟೋ ಬಾರಿ ತನಗೆ ಹಸಿವೆಯಾಗುತ್ತಿದ್ದರೂ, ತನ್ನದೆ ಕೊಕ್ಕಿನ ತುಂಬಾ ಆಹಾರವನ್ನು ತುಂಬಿಕೊಂಡಿದ್ದರೂ, ಅದು ನುಂಗದೆ ತಾಯಿ ಮತ್ತು ಮರಿಹಕ್ಕಿಗಳಿಗೆ ಹೊಟ್ಟೆ ತುಂಬಿಸುತ್ತಿವೆ. ಕೆಲವೊಮ್ಮೆ ಆಹಾರದ ಕೊರತೆಯುಂಟಾಗಿ ಗಂಡುಹಕ್ಕಿ ಸತ್ತು ಹೋದರೆ ಗೂಡಿನಲ್ಲಿರುವ ಮರಿಹಕ್ಕಿಗಳು ಮತ್ತು ತಾಯಿಯೂ ಸತ್ತಂತೆ ! ಈ ಕಾರಣಕ್ಕೆ ಹಾರ್ನ್‌ಬಿಲ್‌ಗಳ ಸಂತತಿ ದಿನದಿಂದ ದಿನಕ್ಕೆ ತೀವ್ರವಾಗಿ ಕುಸಿಯುತ್ತದೆ.

ಹಾರಾಟ ಮಾಡುವ ಹಕ್ಕಿಗಳಿಗೆ ಸಹಜವಾಗಿ ಶಕ್ತಿಬೇಕು ಅವು ತಿಂದ ಆಹಾರ ಬಹುಬೇಗ ಅರಗಿಹೋಗಿ ಬಿಡುತ್ತದೆ. ಹಾಗಾಗಿ ಇಡೀ ರಾತ್ರಿಯ ಹಸಿವಿನ ನಂತರ ನಸುಕು ಬೆಳಕು ಮೂಡುತ್ತಿರುವಂತೇ ಎದ್ದುಬಿಡುತ್ತವೆ ಮತ್ತು

ಆಹಾರ ಶೋಧ ಕಾರ್ಯದಲ್ಲಿ ತೊಡಗುತ್ತಿವೆ. ಹೊಟ್ಟೆಯ ಪ್ರಶ್ನೆ ಒಮ್ಮೆ ಬಗೆಹರಿದರೆ, ಮತ್ತೊಮ್ಮೆ ಹಸಿವಾಗುವರೆಗೆಗೆ ಸ್ವಲ್ಪ ವಿರಾಮ. ಆಗ ಆವು ಮೊದಲು ತಮ್ಮ ಶುಚಿತ್ವದ ಕಡೆಗೆ ಗಮನ ಕೊಡುತ್ತವೆ. ನಂತರ ಕುಪ್ಪಳಿಸುವುದು, ಕಾರಣವಿಲ್ಲದೆ ಹಾರಾಡುವುದು, ಪರಿಸರ ಶೋಧಕಾರ್ಯ ಇಂಥ ಚಟುವಟಿಕೆಗಳಲ್ಲಿ ತೊಡಗಿ ತಮ್ಮನ್ನು ತಾವು ಚೈತನ್ಯಪೂರ್ಣರಾಗಿರಿಸಿಕೊಳ್ಳುತ್ತವೆ ಆದರೆ ತಮ್ಮ ವಂಶಾಭಿವೃದ್ಧಿಯ ಕಾಲಬಂದಾಗ ಮಾತ್ರ ಗಂಡು ಹೆಣ್ಣುಗಳು ಪರಸ್ಪರ ಆಕರ್ಸಿಸಿಕೊಂಡು, ಅವುಗಳಿಗೆ ಹುಟ್ಟಿದ ಮರಿಗಳು ಬಲಿಸ್ಥವಾಗಿ ಹಾರಿಹೋಗುವತನಕ ಹಕ್ಕಿಗಳಿಗೆ ಬಿಡುವಿಲ್ಲದಷ್ಟು ಕೆಲಸ.

**ಪ್ರಶ್ನೆಗಳು :**

(i) ಈ ಸಾಮರ್ಥ್ಯಗಳೆಲ್ಲ ಹಕ್ಕಿಗಳಿಗೆ ನಿಸರ್ಗದತ್ತವಾಗಿ ಬಂದಿವೆ.

1. ಹಾರುವ
2. ಗೂಡುಕಟ್ಟುದ
3. ಆಹಾರ ಸಂಗ್ರಹಿಸುವ
4. ವಲಸ ಹೋಗುವ

ಸರಿಯಾದ ಗುಂಪು ಆರಿಸಿ :

(a) 1, 2, 3    (b) 2, 3, 4
(c) 1, 2, 4    (d) 1, 3, 4

(ii) ಕಾಗೆಗಳು, ಟ್ರಫಿಕ್ ಲೈಟ್ ಬಳಿವಾಲ್ನಟ್ ಬೀಜಗಳನ್ನು ಚಲ್ಲಲು ಕಾರಣ

(a) ಸ್ಥಳ ಸ್ವಚ್ಚವಿರುವದೆಂದು
(b) ಗಾಡಿಗಳು ಚಲಿಸಿ ಬಿಡೆಯಲೆಂದು
(c) ಮೇಲಿನಿಂದ ಬಿದ್ದ ಬೀಜ ಒಡೆಯಲೆಂದು
(d) ಬೀಜವನ್ನು ಪರೀಕ್ಷಿಸಲು

(iii) ಗುಬ್ಬಚ್ಚಿ ತಮ್ಮ ಮರಿಗಳಿಗೆ __________ ಬಾರಿ ಗುಟುಕು ನೀಡುತ್ತವೆ.

(a) ನೂರೊಂಗು

(b) ನೂರಾರು

(c) ನೂರೆಗಡು

(d) ನೂರು

(iv) ಗಂಡು ಮಂಗಟ್ಟೆಹಕ್ಕಿ ತನ್ನ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುತ್ತದೆ ?

(a) ಆಹಾರವನ್ನು ಪೂರೈಸಲು ಇತರ ಹಕ್ಕಿಯ ಸಹಾಯವನ್ನು ಪಡೆವ ಮೂಲಕ

(b) ಆಹಾರ ತಿನ್ನಿಸಬೇಕಾದಾಗ ತಾಯಿ–ಮರಿಹಕ್ಕಿಗಳನ್ನು ಅಲ್ಲಿಗೆ ಒಯ್ಯುತ್ತದೆ

(c) ತನಗೆ ಹಸಿವಾಗಿದ್ದರೂ, ಕೊಕ್ಕಿನಲ್ಲಿ, ಆಹಾರ ತುಂಬಿಕೊಂಡಿದ್ದರೂ ತಾಯಿ ಮತ್ತು ಮರಿಹಕ್ಕಿಗಳ ಹೊಟ್ಟೆ ತುಂಬಿಸುವ ಮೂಲಕ

(d) ಒಂದು ವಾರಕ್ಕೆ ಸಾಕಾಗುವಷ್ಟು ಆಹಾರವನ್ನು ಒಮೆ ಸಂಗ್ರಹಿಸುವ ಮೂಲಕ

(v) ಪಕ್ಷಿಗಳು ತಮ್ಮನ್ನು ಚೈತನ್ಯಪೂರ್ಣವಾಗಿರಿಸಿಕೊಳ್ಳಲು ಮಾಡುವುದು

(a) ಪರಿಸರ ಶೋಧಕಾರ್ಯ

(b) ಹಾರಾಡುವುದು

(c) ಕುಪ್ಪಳಿಸುವುದು

(d) ಎಲ್ಲವೂ ಸರಿ

## ಭಾಗ – B

## (ಅನ್ವಯಿಕ ವ್ಯಾಕರಣ) : 16 ಅಂಕಗಳು

**3.** ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 5 ಪ್ರಶ್ನೆಗಳಿವೆ ಅವುಗಳಲ್ಲಿ ಯಾವುದಾದರೂ **4** ಪ್ರಶ್ನೆಗಳಿಗೆ ಉತ್ತರಿಸಿ : *4×1=4*

(i) ಈ ಆಯ್ಕೆಗಳಲ್ಲಿ ಜಶ್ತ್ವ ಸಂಧಿಗೆ ಉದಾಹರಣೆಯಾಗಿರುವ ಪದ

(a) ಪರ್ಶಿಯನ್

(b) ವನೌಷಧಿ

(c) ಸೂರ್ಯೋದಯ

(d) ವಾಗ್ದೇವಿ

(ii) ಸಂದೇಯ – ಪದದ ತತ್ಸಮ ರೂಪ

(a) ಸಂಶಯ

(b) ಅನುಮಾನ

(c) ಸಂದೇಹ

(d) ಸಂದೇಶ

(iii) ಚತುರ್ಥಿ ವಿಭಕ್ತಿ ಪ್ರತ್ಯಯದ ಕಾರಣಾರ್ಥ

(a) ಕರ್ತೃ

(b) ಕರ್ಮ

(c) ಕರಣ

(d) ಸಂಪ್ರದಾನ

(iv) ಒಳಿತು – ಪದದ ವಿರುದ್ಧಾರ್ಥಕ ಪದ

(a) ಬಳ್ಳಿತು

(b) ಬಲಿತು

(c) ಕೆಡಕು

(d) ಕಳಿತು

(v) ಆ ಕಲ್ಲು ತುಂಬಾ ದಪ್ಪಗಿದೆ – ಅಡಿಗೆರೆ ಎಳೆದಿರುವ ಪದದ ಸಮಾಸ

(a) ಕ್ರಿಯಾಸಮಾಸ

(b) ದ್ವಂದ್ವ ಸಮಾಸ

(c) ತತ್ಪುರುಸ ಸಮಾಸ

(d) ಗಮಕ ಸಮಾಸ

**4.** ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ **4** ಪ್ರಶ್ನೆಗಳಿಗೆ ಉತ್ತರಿಸಿ. *4×1=4*

(i) ಕಿಂಕರ : ಸೇವಕ :: ಉರವಣಿಸು : _____

(a) ಹಂಗು

(b) ಹೆಚ್ಚಾಗು

(c) ಇಷ್ಟಪಡದ

(d) ಕೈಚಾಚು

(ii) ಐವತ್ತನೆಯ – ಇದು _______ ಪದಕ್ಕೆ ಉದಾಹರಣೆಯಾಗಿದೆ.

(a) ಸರ್ವನಾಮ

(b) ಸಂಖ್ಯಾವಾಚಕ

(c) ಕ್ರಿಯಾಪದ

(d) ಸಂಖ್ಯೇಯವಾಚಕ

(iii) ಅವನು ತನ್ನ ಬಲಗಾಲಿನಿಂದ ಚೆಂಡನ್ನು ಒದೆದನು – ಈ ವಾಕ್ಯಗಳಲ್ಲಿರುವ ಕರ್ಮ ಪದ

(a) ಅವನು

(b) ಬಲಗಾಲಿನಿಂದ

(c) ಚೆಂಡನ್ನು

(d) ಒದೆದನು

(iv) ದ್ವಿರುಕ್ತಿ ಪದವಿದು

(a) ಬಟ್ಟಬಯಲು

(b) ದಡದಡ

(c) ಹಾಲ್ಜೇನು

(d) ಚಟಚಟ

(v) ಪ್ರಯಾಣಿಕರು ತಾವು ತಲುಪಬೇಕಾದ ಊರನ್ನು ತಲುಪಿದರು – ಇಲ್ಲಿರುವ ಆತ್ಮಾರ್ಥಕ ಸರ್ವನಾಮ

(a) ಪ್ರಯಾಣಿಕರು

(b) ಊರನ್ನು

(c) ತಲುಪಿದರು

(d) ತಾವು

**5.** ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 5 ಪ್ರಶ್ನೆಗಳಿವೆ. ಅವುಗಳಲ್ಲಿ ಯಾವುದಾದರೂ **4** ಪ್ರಶ್ನೆಗಳಿಗೆ ಉತ್ತರಿಸಿ. *4×1=4*

(i) ಇಲ್ಲದ್ಹಂಗ

(a) ಇಲ್ಲಹಾಗೆ

(b) ಇಲ್ಲದ ಹಾಗೆ

(c) ಇಲ್ಲದೆ ಹಾಗೆ

(d) ಇದ್ದಾಗ್ಗೆ

(ii) ನಿಷೇಧಾರ್ಥಕ ಕ್ರಿಯಾಪದದ ರೂಪವಿದು

(a) ನೆನೆಯರು

(b) ನೆನೆದಾರು

(c) ನೆನೆಯಬೇಕು

(d) ನೆನೆಯಲಿ

(iii) ಗಾನವಿಯು ಸುಶ್ರಾವ್ಯವಾದ ಹಾಡನ್ನು ಹಾಡಿದಳು – ಇದರ ಕರ್ಮಣಿ ರೂಪ

(a) ಸುಶ್ರಾವ್ಯವಾದ ಹಾಡನ್ನು ಗಾಸವಿಯು ಹಾಡಿದಳು

(b) ಸುಶ್ರಾವ್ಯವಾದ ಹಾಡನ್ನು ಹಾಡಿದಳು ಗಾನವಿಯು

(c) ಗಾನವಿಯಿಂದ ಸುಶ್ರಾವ್ಯವಾದ ಹಾಡು ಹಾಡಲ್ಪಟ್ಟಿತು

(d) ಸುಶ್ರಾವ್ಯವಾದ ಹಾಡು ಗಾನವಿಯಿಂದ ಹಾಡಲ್ಪಟ್ಟಿತೇ ?

(iv) ಹೆತ್ತತಾಯಿ ಹೊತ್ತನಾಡು ___________ ಮಿಗಿಲು.

(a) ಸ್ವರ್ಗಕ್ಕಿಂತ

(b) ದೇವರಿಗಿಂತ

(c) ದೇಶಕ್ಕಿಂತ

(d) ನಾಡಿಗಿಂತ

(v) ಕಟ್ಟೋಣ – ಕ್ರಿಯಾಪದದ ರೂಪ

(a) ಕಟ್ಟಿದ

(b) ಕಟ್ಟು

(c) ಕಟ್ಟಿ

(d) ಕಟ್ಟಿಗ

**6.** ಕೆಳಗಿನ ವ್ಯಾಕರಣಾಂಶಗಳ ಬಹು ಆಯ್ಕೆಯ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ. *4×1=4*

(i) ಬಾಗಿಲನ್ನು ಮೆಲ್ಲಗೆ ಮುಚ್ಚು; ಮಗುವಿಗೆ ಎಚ್ಚರವಾಗುವುದು – ಇದ ಸಂಭವನಾರ್ಥಕ ರೂಪ

(a) ಬಾಗಿಲನ್ನು ಮೆಲ್ಲಗೆ ಮುಚ್ಚು; ಮಗುವಿಗೆ ಎಚ್ಚರವಾಗದಿರಲಿ

(b) ಬಾಗಿಲನ್ನು ಮೆಲ್ಲಗೆ ಮುಚ್ಚು; ಮಗವಿಗೆ ಎಚ್ಚರವಾಗಬಾರದು

(c) ಬಾಗಿಲನ್ನು ಮೆಲ್ಲಗೆ ಮುಚ್ಚು; ಮಗುವಿಗೆ ಎಚ್ಚರವಾದೀತು

(d) ಬಾಗಿಲನ್ನು ಮೆಲ್ಲಗೆ ಮುಚ್ಚು; ಮಗುವಿಗೆ ಎಚ್ಚರವಾಗದೇ ?

(ii) ಸತಿಪದಿ : ಜೋಡುನುಡಿ :: ಅಬ್ಬಬ್ಬಾ: ______

(a) ದ್ವಿರುಕ್ತಿ

(b) ಅನುಕರಣಾವ್ಯಯ

(c) ಜೋಡುನುಡಿ

(d) ಪ್ರತಿಧ್ವನಿಪದ

(iii) ಈ ಪದಗಳಲ್ಲಿ ಆಗಮ ಸಂಧಿಗೆ ಉದಾಹರಣೆಯಾಗಿರುವ ಪದ

(a) ಮಗುವಿಗೆ

(b) ಮಾತಂತು

(c) ಸನ್ಮಾನ

(d) ಮಳೆಗಾಲ

(iv) ಸರ್ವತ : ರೂಢನಾಮ :: ವಿದ್ವಾಂಸ : ______

(a) ಅಂಕಿತನಾಮ

(b) ಅನ್ವರ್ಥಕನಾಮ

(c) ಗುಣವಾಚಕ

(d) ನಾಮವಾಚಕ

## ಭಾಗ – C

## (ಬಹುಆಯ್ಕೆ ಪ್ರಶ್ನೆ – ಪದ್ಯಗಳ ಅದಯುನು) : 14 ಅಂಕಗಳು

**7.** ಈ ಕೆಳಗೆ ಕೊಟ್ಟಿರುವ 'ಹಲಗಲಿ ಬೇಡರು' ಪದ್ಯದಲ್ಲಿನ ಪರಿಚಿತ ಲಾವಣಿಯನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. *5×1=5*

ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿ ಹಿಡಿಯುವ ಜನಕ–

ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೋ ದಡಕ ||ಪ||

ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ
ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ
ಹಲಗರಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ
ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗರಾಮ ಮಸಲತ್ತ
ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ
ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವುದು ಗೊತ್ತ
ಹೊಡಿರಿ ಜಗಳ ಕೂಡಿ ತೀರ್ಥವು ಕುಮರಿ ನಮ್ಮದ್ಯಾವತ್ತ
ಒಳಗಿಂದೊಳಗ ವಚನ ಕೊಟ್ಟರೊ ಬ್ಯಾಡರೆಲ್ಲ ಕಲ್ತ
ಕಾರಕೂನನ ಕಪಾಳತ ಬಡಿದರ ಸಿಪಾಯಿ ನೆಲಕಬಿತ್ತ
ಆಗಿಂದಾಗ ದುಃಖದ ಸುದ್ದಿ ಸಾಹೇಬಗ ಹೊಯ್ತು |೧|

ಸಿಟ್ಟಲಿ ಮುಂಗೈ ಕಟ್ಟನೆ ಕಡಕೊಂಡ, ಹುಕುಮ ಕೊಟ್ಟ ಸಾಹೇಬಾಗ
ಕುದರಿ ಮಂದಿ ಕೂಡಿ ಮುಟ್ಟತೊ ಹಲಗಲಿ ತಳದ ಮ್ಯಾಗ
ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿನ ಸಿಡಿಲ ಸಿಡಿದ್ಹಾಂಗ
ಹೊರಗಿನ ಮಂದಿ ಗುಂಡ ಹತ್ತಿ ಸರಿದು ನಿಂತರೊ ಹಿಡಿದ ದಂಗ
ಕಾಗದ ಬರೆದು ಕಳುವ್ಯಾರೆ ಬೇಗ, ದಂಡು ಬರಲೆಂತ ಹೀಂಗ
ದಂಡು ಬಂದಿತೂ ತಯಾರಾಗಿ ಜಲದಿ ಮಾಡಿ ಹಲಗಲಿಗಿ |೨|

ಬೆನ್ನಬೆನ್ನತ್ತಿ ತಿರಿತಿರ್ವಿ ಕಡಿದರೊ ಏನೂ ಉಳಿಯದ್ದಂಗ
ನಡುವೆ ಹಾಕ್ಕೊಂಡು ಹೊಡೆದರೊ ಗುಂಡ ಕರಣ ಇಲ್ಲದ್ದಂಗ
ಚಟೆಗಾರರು ಚೌಕಿ ಮಾಡುತ, ನಡಿದರೊ ಹೇಳದೆ ಗುಡದಾಗ

ಅಗಸಿಗೆ ಬಂದು 'ಹೆಬಲಕ' ಸಾಬ ಹೇಳತಾನ ಬುದ್ಧಿಮಾತ
ಕೊಡುತಿವಿ ಕಬುಲ ಕೇಳರಿ ಮಾತ, ಹೋಗಬ್ಯಾಡರಿ ಸತ್ತ
ಅನುವ ಮಾತಿಗೆ ನಂಬಿಗೆ ಸಾಲದೆ 'ಹನುಮ' ಬಂದನೊ ಮುಂದಿತ್ತ |೩|

ಜಡಗ ಹೇಳಿತಾನೊ ಹೊಡೆಯಿರಿ ಇವರ ಪೂರ ಘಾತುಕರಾ
ಇಸವಾಸಘಾತಕ ಮಾಡಿದರಿವರ, ನಂಬಿಗಿಲ್ಲನಮಗ ಪಿಟೊರಾ
ಮೋಸ ಮಾಡಿ ನಮದೇಶ ಗೆದಿತಾರೊ ಮುಂದ ನಮಗೆ ಘೋರಾ
ಅಂದು ಹೊಡೆದಾನೊ ಒಂದು ಗುಂಡಿಗೆ ಆದ ಸಾಹೇಬನ ಠಾರಾ
'ಕಾರ' ಸಾಹೇಬ ಬೆಂಕಿ ಚೂರಿಂದ ಲೂಟಿ ಮಾಡಂತನೊ ಊರಾ
ಸಿಟ್ಟಲಿ ಹೊಡೆದರು ಸಿಡಿಲಸಿಡಿದ್ದಾಂಗ ಗುಂಡು ಸುರಿದಾವ ಭರಪೂರಾ
ಹನುಮ ? ಹೇಳತಾನ ಗುಂಡು ಹೊಡಿದು ಕೆರ ಕೆಡವು ನಷ್ಟಬಾರ
ಮುನ್ನೊರ ಮಂದಿ ಮೈಮ್ಯಾಗ ಬಂದರ ಆಗ ನೋಡೊ ಜೋರಾ
ಭೀಮನು ಇದುರಿಗೆ ನಿಂತ ಐನೂರ್ಮಂದಿಗೆ ಮತ್ತಾ
ಬಾಲನು ಮಾಡಿದ ಕಸರತ್ತಾ, ಕುದುರಿಯ ಕಡಿದು ಹತ್ತಿಪ್ಪತ್ತಾ
ರಾಮನ ಕಡಿತ ವಿಪರೀತಾ, ಕಾಲುವೆ ಹರಿತೊ ರಕ್ತಾ
ಸಾವಿರ ಆಳಿಗೆ ಒಬ್ಬ ಕೂಗತಾನೊ, ಕಡಿಕಡಿರಿ ಅಂತ ಮತ್ತಾ

**ಪ್ರಶ್ನೆಗಳು :**

(i) ವಿಲಾತಿಯಿಂದ ಕುಂಪಣಿ ಸರ್ಕಾರ ಏನನ್ನು ಕಳಿಸಿತು ?

(a) ಹುಕುಮನ್ನು (b) ಕಾರಕೂನನನ್ನು

(c) ಸೈನ್ಯವನ್ನು (d) ಆಯುಧಗಳನ್ನು

(ii) ಒಳಗಿಂದೊಳಗೆ ವಚನ ಕೊಟ್ಟವರು __________

(a) ಕಾರಕೂನ

(b) ಸಾಹೇಬ

(c) ಸಿಪಾಯಿ

(d) ಹಲಗಲಿ ಬೇಡರು

(iii) ಹೊಡೆದ ಗುಂಡುಗಳು _________ ಸಿಡಿಲ ಸಿಡಿದ್ಹಾಂಗ.

(a) ಹಿಂಗಾರಿನ

(b) ಮುಂಗಾರಿನ

(c) ಸಿಟ್ಟಿನ

(d) ಕೋಪದ

(iv) ಅಗಸಿಗೆ ಬಂದು ಬುದ್ಧಿಮಾತು ಹೇಳಿದವರು

(a) ಹೆಬಲಕ

(b) ಜಡಗ

(c) ಪೂಜಾರಿ ಹನುಮ

(d) ರಾಮ

(v) ಊರನ್ನೆಲ್ಲ ಲೂಟಿ ಮಾಡಿರೆಂದು ಹೇಳಿದ ಬ್ರಿಟಿಷ ಅಧಿಕಾರಿ

(a) ಟಾರಾ ಸಾಹೇಬ

(b) ಕಾರ ಸಾಹೇಬ

(c) ಚೆಟೇಗಾರರು

(d) ಹೆಬಲಕ್ ಸಾಹೇಬ

**8.** ಈ ಕೆಳಗೆಕೊಟ್ಟಿರುವ ಸಮಿತಿ ರಚನೆ / ದಿ.ಎನ್. ಜಯಪ್ಪ ಗೌಡ ಅವರ 'ಭಾಗ್ಯಶಿಲ್ಪಿಗಳು' ಪಠ್ಯದಲ್ಲಿನ ಪರಿಚಿತ ಗದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : *5×1=5*

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 'ಪ್ರಜಾಪ್ರತಿನಿಧಿ ಸಭೆ' ಯು ನೂತನ ರೂಪವನ್ನು ಪಡೆದು, ನಿಜವಾದ ಜನ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. ಅದಕ್ಕಾಗಿ 1923 ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು, ಪ್ರಜಾಪ್ರತಿನಿಧಿ ಸಭೆಯನ್ನು ಶಾಶನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇದು ಪ್ರಜಾತಂತ್ರದ ದೃಷ್ಟಿಯಿಂದ ಭಾರತದಲ್ಲಿಯೇ ಮಾದರಿಯಾದ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಆರಂಭಿಸಿತು.ಪ್ರಜಾ ಪ್ರತಿನಿಧಿ ಸಭೆಯು ವರ್ಷಕ್ಕೆ ಎರಡು ಬಾರಿ (1 ಜೂನ-ಮಹಾರಾಜರ ವರ್ಧಂತಿ, 2 ಅಕ್ಟೋಬರ್-ದಸರಾ ಮಹೋತ್ಸವ) ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯ, ಪರಿಶೀಲನೆ, ಪ್ರಶ್ನೋತ್ತರಗಳು. ಠರಾವುಗಳನ್ನು ಮಂಡಿಸುವುದು ಮುಂತಾದ ಸಂಸದೀಯ ಮಾದರಿಯ ನಡವಳಿಕೆಗಲು ನಡೆಯುತ್ತಾದ್ದವು. ಪ್ರತಿನಿಧಿ ಸಭೆಯಲ್ಲಿದ್ದ 275 ಸದಸ್ಯರಲ್ಲಿ ಹೆಚ್ಚು ಪ್ರತಿನಿಧಿಗಳು ಜನರಿಂದ ಆಯ್ಕೆಯಾದವರಾಗಿದ್ದರು.

ನಾಲ್ವಡಿ ಕೃಷ್ಣರಾಜರು 1907 ರಲ್ಲಿನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದರು. ಇದರ ಸದಸ್ಯರ ಸಂಖ್ಯೆ 50. ಇದರಲ್ಲಿ ಜನರಿಂದ ಆಯ್ಕೆಯಾದವರು 22 ಸದಸ್ಯರು. ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಸಂಸ್ಥೆ ಜೂನ್ ಮತ್ತು ಡಿಶೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಅಧಿಕಾರ ಆ ಸಭೆಗೆ ಇದ್ದಿತುಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯ ವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

ಕೊಡುಗೆ, ಸ್ಥಳೀಯಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು. ನಗರಪಾಲಿಕೆಗಳು ಹಾಗೂ ಗ್ರಾಮ ಪಂಚಾಯಿತಿಗಳು ಕಾರ್ಯನಿರ್ವಹಿಸಲು ಆರಂಭ ಮಾಡಿದವು. ಇವರ ಕಾಲದಲ್ಲಿ 1 ಗ್ರಾಮ ನಿರ್ಮಲಿಕರಣ 2 ವೈದ್ಯ ಸಹಾಯ 3 ವಿದ್ಯಾ ಪ್ರಚಾರ 4 ನೀರಿನ ಸೌಕರ್ಯ 5 ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು. 'ಸಾಮಾಜಿಕ ಕಾನೂನುಗಳ ಹರಿಕಾರ' ಎಂದು ಹೆಸರಾದರು ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ಬೆಂಗಳೊರಿನಲ್ಲಿ ಕನ್ನಡ ಸಾಹಿತ್ಯ ಪರಿಸತ್ತೆನ್ನು ಪ್ರಾರಂಭಿಸಿದರು.

**ಪ್ರಶ್ನೆಗಳು :**

(i) ಪ್ರಜಾಪ್ರತಿನಿಧಿ ಸಭೆಯನ್ನು ಯಾವಾಗ ಶಾಸನಬದ್ಧ ಸಂಸ್ಥೆಯನ್ನಾಗಿ ಮಾಡಲಾಯೀತು ?

(a) 1913 ರಲ್ಲಿ

(b) 1933 ರಲ್ಲಿ

(c) 1903 ರಲ್ಲಿ

(d) 1923 ರಲ್ಲಿ

(ii) ಮಹಾರಾಜರ ವರ್ಧಂತಿಯಂದು ಸಮಾವೇಶಗೊಳ್ಳುತ್ತದ್ದ ಸಭೆ

(a) ಶಾಸನ ಸಭೆ

(b) ನ್ಯಾಯ ಸಭೆ

(c) ಪ್ರಜಾ ಸಭೆ

(d) ಪ್ರಜಾಪ್ರತಿನಿಧಿ ಸಭೆ

(iii) ನ್ಯಾಯ ವಿಧಾಯಕ ಸಭೆಯು __________ ಸಮಾವೇಶಗೊಳ್ಳುತ್ತಿತ್ತು.

(a) ಮೈಸೂರಿನಲ್ಲಿ

(b) ಬೆಂಗಳೂರಿನಲ್ಲಿ

(c) ಮಂಡ್ಯದಲ್ಲಿ

(d) ಶ್ರೀರಂಗಪಟ್ಟಣದಲ್ಲಿ

(iv) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿದ್ದ ಸ್ವಯಂ ಆಡಳಿತ ಕ್ಷೇತ್ರಗಳ ಸಂಖ್ಯೆ ________ .

(a) ಆರು

(b) ಏಳು

(c) ಐದು

(d) ಹದಿನೈದು

(v) ನ್ಯಾಯ ವಿಧಾಯಕ ಸಭೆಯಲ್ಲಿ ಜನರಿಂದ ಆಯ್ಕೆ ಆದ ಸದಸ್ಯರ ಸಂಖ್ಯೆ ___________ .

(a) 50
(b) 275
(c) 33
(d) 22

**9.** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ : *4×1=4*

(i) ವಿವೇಕಾನಂದರ ಮೊದಲ ಅದ್ಯತೆ __________ ಹಸಿವನ್ನು ಹಿಂಗಿಸುವುದು.

(a) ವೇದಾಂತದ

(b) ಆತ್ಮದ

(c) ದೈಹಿಕ

(d) ಧರ್ಮದ

(ii) ಪುಟ್ಟ ಪೋರಿ ___________ ಕೆಲಸ ಮಾಡುತ್ತಿದ್ದಾಳೆ.

(a) ಮುಸುರೆ ತಿಕ್ಕುವ

(b) ಭತ್ತ ಕುಟ್ಟುವ

(c) ಕಸ ಗುಡಿಸುವ

(d) ಸಾರಣೆಯ

(iii) ವರ್ತಕ ಹಳ್ಳಿಗೆ ಹೋಗಲು ತೀರ್ಮಾನಿಸಲು ಕಾರಣ __________ .

(a) ನಗರದ ಬದುಕು ಸಾಕಾಗಿ

(b) ವ್ಯಾಪಾರದಲ್ಲಿ ಆದ ನಷ್ಟ

(c) ಹಳ್ಳಿಯ ಜೀವನ ಬಯಸಿ

(d) ವ್ಯವಸಾಯ ಮಾಡಲು

(iv) ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ____________ ಪ್ರತೀಕ ಎಂದು ತೋರಿಸುತ್ತಾನೆ.

(a) ತ್ಯಾಗದ

(b) ಶೌರ್ಯದ

(c) ಸಹನೆಯ

(d) ಆದರ್ಶದ

## ಭಾಗ – D

## (ಬರವಣಿಗೆ ಕೌಶಲ್ಯ) : 12 ಅಂಕಗಳು

**10.** ನಿಮ್ಮ ಶಾಲಾ ಗ್ರಂಥಾಲಯಕ್ಕೆ ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡ ಕೃತಿಗಳನ್ನು ವಿ.ಪಿ.ಪಿ. ಮೂಲಕ ಕಳುಹಿಸಿಕೊಡಲು ಕೋರಿ 'ವ್ಯವಸ್ಥಾಪಕರು, ಸಮಾಜ ಪುಸ್ತಕಾಲಯ ಧಾರವಾಡ' ಇಲ್ಲಿಗೆ ಪತ್ರ ಬರೆಯಿರಿ. *4*

**ಅಥವಾ**

ದಿನಾಂಕ 1-2-2023 ರ ಪ್ರಜಾವಾಣಿ ದಿನ ಪತ್ರಿಕೆಯ ಪ್ರಕಟಣೆಯ ಮೇರೆಗೆ 'ಅಧ್ಯಕ್ಷರು, ಸರ್ವೋದಯ ವಿದ್ಯಾಲಯ, ಉಡುಪಿ' ಇಲ್ಲಿಗೆ ಕೌನ್ಸಲರ್ ಹುದ್ದೆಗೆ ಅರ್ಜಿ ಸಲ್ಲಿಸಿ.

**11.** ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಸುಸಂದರ್ಭದಲ್ಲಿ ನಿಮ್ಮ ವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಹಾತ್ಮ ಗಾಂಧೀಜಿ ಅವರ ಮೂರ್ತಿ ಅನಾವರಣ ಕಾರ್ಯಕ್ರಮದ ವರದಿ ತಯಾರಿಸಿ. *4*

**12.** ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಸಯವನ್ನು ಕುರಿತು ಪ್ರಬಂಧ ಬರೆಯಿರಿ : *4*

(i) ಗ್ರಾಮ ಸ್ವರಾಜ್ಯ

(ii) ಪ್ರಾಚ್ಯ ಸ್ಥಾರಕಗಳ ಸಂರಕ್ಷಣೆ

(iii) ರಾಷ್ಟ್ರೀಯ ಹಬ್ಬಗಳ ಮಹತ್ವ

**(ಪದ್ಯಗಳ ಅಧ್ಯಯನ) : 28 ಅಂಕಗಳು**

**13.** ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ : *4×2=8*

(i) ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು ?

(ii) ಕುಂತಿ ಮಾದ್ರಿಯರು ಯಾರ್‍ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು ?

(iii) ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು ?

(iv) ಯಾರಿಗೆ ವಸಂತ ಮುಖ ತೋರಲಿಲ್ಲ?

**14.** ಈ ಕೆಳಗೆ – ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ : *2×3=6*

(i) ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ವಿವರಿಸಿ.

(ii) ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

**15.** ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ : *2×3=6*

(i) (a) "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"

**ಅಥವಾ**

(b) "ಹುಲಿ, ಈಗ ಎಷ್ಟು ಹಸಿದಿರಬೇಕು."

(ii) (a) “ಬೇರೆ ಬಣ್ಣವನೆ ಕಾಗೆ”

**ಅಥವಾ**

(b) “ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು”

**16.** ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ : *4×1=4*

(i) ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?

**ಅಥವಾ**

(ii) “ವೃಕ್ಷಸಾಕ್ಷಿ” ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ? ಏಕೆ ?

**17.** ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ : *4×1=4*

(i) ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ ?

**ಅಥವಾ**

(ii) ದುರ್ಯೋಧನನ ಗೆಳೆಯನಾಗಿ ಹಾಗೂ ಪಾಂಡವರ ಸಹೋದರನಾಗಿ ಕರ್ಣನು ತನ್ನ ಕರ್ತವ್ಯವನ್ನು ಹೇಗೆ ನಿರ್ವಹಿಸಿದನು ?